# ಕರ್ನಾಟಕ ಸರ್ಕಾರ

ನಂ.ಗ್ರಾಅಪ/09/ಗ್ರಾಪಂಅ/2016

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:16-04-2016.

## ಸುತ್ತೋಲೆ-1

**ವಿಷಯ:** ಗ್ರಾಮ ಪಂಚಾಯತಿಗಳು ತೆರಿಗೆಗಳು, ದರಗಳು ಮತ್ತು ಶುಲ್ಕಗಳನ್ನು ವಿಧಿಸುವ ಹಾಗೂ ಪರಿಷ್ಕರಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ : ಸಂವ್ಯಶಾಇ 45 ಶಾಸನ 2015, ದಿನಾಂಕ:31-12-2015.
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 09 ಗ್ರಾಪಂಅ 2016 ದಿನಾಂಕ:25-02-2016.

*****

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ನ್ನು ಜಾರಿಗೊಳಿಸುವ ಮೂಲಕ ಹಾಗೂ ವಿಕೇಂದ್ರಿಕರಣದ ತತ್ವಕ್ಕನುಸಾರವಾಗಿ ರಾಜ್ಯದ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನ, ಪ್ರಕಾರ್ಯಗಳು ಹಾಗೂ ಸಿಬ್ಬಂದಿಗಳನ್ನು ಹಸ್ತಾಂತರಿಸಲಾಗಿದೆ. ಆಯಾ ಪ್ರಕಾರ್ಯಗಳನ್ನು ಆಯಾ ಹಂತಗಳಲ್ಲಿಯೇ ಅನುಷ್ಠಾನಗೊಳಿಸಲು ಅನುವಾಗುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಎಲಾ ಯೋಜನೆಗಳನ್ನು ಗ್ರಾಮ ಪಂಚಾಯತಿಯಿಂದ ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ವಹಿಸಿದ್ದು, ಅದರಂತೆ ಪ್ರತಿ ಯೋಜನೆಯ ಅನುದಾನವನ್ನು ನೇರವಾಗಿ ಗ್ರಾಮ ಪಂಚಾಯತಿಗೆ ಬಿಡುಗಡೆ ಮಾಡಲಾಗುತ್ತಿದೆ. ಇದರಿಂದಾಗಿ ಗ್ರಾಮ ಪಂಚಾಯತಿಗಳು ಪರಿಣಾಮಕಾರಿಯಾಗಿ ಸ್ಥಳೀಯ ಸರ್ಕಾರದಂತೆ ಕಾರ್ಯನಿರ್ವಹಿಸಬೇಕಾಗಿದ್ದು, ಅವುಗಳ ಜವಾಬ್ದಾರಿ ಮತ್ತು ಕರ್ತವ್ಯಗಳು ಹೆಚ್ಚಾಗಿವೆ.

ಕರ್ನಾಟಕ ಪಂಚಾಯತ್ ರಾಜ್ (2ನೇ ತಿದ್ದುಪಡಿ) ಅಧಿನಿಯಮ, 2015 ದಿನಾಂಕ:25-02-2016 ರಿಂದ ಜಾರಿಗೆ ಬಂದಿದ್ದು, ಅದರಂತೆ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳು ಕ್ರಮವಹಿಸುವಂತೆ ಈಗಾಗಲೆ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು; ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ (2ನೇ ತಿದ್ದುಪಡಿ) ಅಧಿನಿಯಮ, 2015ರ ಪ್ರಕರಣ 199 ರಲ್ಲಿ ಗ್ರಾಮ ಪಂಚಾಯತಿಗಳು ಪಂಚಾಯತಿ ಪ್ರದೇಶದ ಪರಿಮಿತಿಗೊಳಗಿರುವ **ಕೃಷಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರದ ಕಟ್ಟಡಗಳು ಮತ್ತು ಭೂಮಿಗಳ ಮೇಲೆ ಸ್ವತ್ತಿನ ಬಂಡವಾಳ ಮೌಲ್ಯದ ಆಧಾರದಲ್ಲಿ** ಹಾಗೂ ಗ್ರಾಮ ಪಂಚಾಯತಿಯು ಕುಡಿಯುವುದಕ್ಕೆ ಮತ್ತು ಇತರ ಉದ್ದೇಶಗಳಿಗಾಗಿ ನೀರು ಸರಬರಾಜು ಮಾಡಲು ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರರಕಣ 199 ರಂತೆ ಗ್ರಾಮ ಪಂಚಾಯತಿಗಳು ತೆರಿಗೆ ಮತ್ತು ಶುಲ್ಕವನ್ನು ಅನುಸೂಚಿ-IV ರಲ್ಲಿ ನಿರ್ದಿಷ್ಟಪಡಿಸಿರುವಂತೆ ಹಾಗೂ ನಿಯಮಿಸಬಹುದಾದಂತ ಯಾವುದೇ ಇತರೆ ಶುಲ್ಕವನ್ನು ವಿಧಿಸಿ, ವಸೂಲಿ ಮಾಡಬಹುದಾಗಿದೆ.

ಕರ್ನಾಟಕ ಪಂಚಾಯತ್ ರಾಜ್ (2ನೇ ತಿದ್ದುಪಡಿ) ಅಧಿನಿಯಮ, 2015ರ **ಅನುಸೂಚಿ-IV** ರಲ್ಲಿ ಗ್ರಾಮ **ಪಂಚಾಯತಿಗಳು ಕೈಗಾರಿಕೆಗಳು, ಕಾರ್ಖಾನೆಗಳು, ಐ.ಟಿ. ಪಾರ್ಕ್‌ಗಳು, ಹಾರ್ಡ್‌ವೇರ್ ಪಾರ್ಕ್, ಟೆಕ್ಸ್‌ಟೈಲ್ ಪಾರ್ಕ್, ಬಯೋಟೆಕ್ ಪಾರ್ಕ್, ಪವರ್ ಪ್ಲಾಂಟ್ಸ್, ಹೈಡ್ರೋ ಥರ್ಮಲ್, ಸೋಲಾರ್ ಸ್ಥಾವರಗಳು, ವಿಂಡ್‌ಮಿಲ್ಸ್ ಮತ್ತು ಏರ್‌ಪೋರ್ಟ್ ಮತ್ತು ಇವುಗಳಿಗೆ ಸಂಬಂಧಿಸಿದ ಪ್ರದೇಶ ಇತ್ಯಾದಿಗಳು (ಕೆ.ಐ.ಎ.ಡಿ.ಬಿ ಕೈಗಾರಿಕಾ ಪ್ರದೇಶದಲ್ಲಿ ವಿಶೇಷ ಆರ್ಥಿಕ ವಲಯ (SEZ) ಮತ್ತು ಇತರ ಕೈಗಾರಿಕಾ ಪ್ರದೇಶ ಅಥವಾ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ವಲಯಗಳು) ಕೃಷಿಯೇತರ ಖಾಲಿ ಜಮೀನು ಹಾಗೂ ವಾರ್ಷಿಕ ಎಲ್ಲಾ ರೀತಿಯ ಪ್ರತಿ ಮೊಬೈಲ್ ಟವರ್‌ಗಳ ಮೇಲೆ ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.**

ತೆರಿಗೆಗೆ ಗುರಿಯಾಗುವ ಸ್ವತ್ತಿನ ಮೂಲ ಮೌಲ್ಯ ಎಂದರೆ (ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ, 1957 ರ ಪ್ರಕರಣ 45ಬಿ ರಡಿಯಲ್ಲಿ ಪ್ರಕಟಿಸಲಾದ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದಲ್ಲಿ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ ನಿರ್ಧರಣೆಯ ಸಮಯದ ಮೌಲ್ಯದ ಸವಕಳಿಯನ್ನು ಕಳೆದು ತೆರಿಗೆ ನಿರ್ಧರಿಸಬೇಕಾಗಿರುತ್ತದೆ. ಉಪನೋಂದಾಣಾಧಿಕಾರಿಗಳಿಂದ ಸ್ವತ್ತಿನ ಮೂಲ ಮಾರುಕಟ್ಟೆ ಮೌಲ್ಯವನ್ನು ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪಡೆದುಕೊಂಡು ತೆರಿಗೆ ನಿರ್ಧರಿಸಲು ಕ್ರಮ ವಹಿಸತಕ್ಕದ್ದು.

ಮುಂದುವರೆದು, ಗ್ರಾಮ ಪಂಚಾಯತಿಗಳು ಮನೋರಂಜನೆಗಳ ಮೇಲೆ, ವಾಹನ ನಿಲುಗಡೆ, ಮಾರುಕಟ್ಟೆಗಳ ಮೇಲೆ, ಪಶುಗಳ ನೋಂದಣಿಯ ಮೇಲೆ ಹಾಗೂ ಆಪ್ಟಿಕಲ್ ಫೈಬರ್ಸ್ ಕೇಬಲ್‌ಗಳನ್ನು ಹಾಕುವುದಕ್ಕಾಗಿ ರಸ್ತೆಗಳನ್ನು ತೋಡುವುದಕ್ಕಾಗಿ ಶುಲ್ಕಗಳನ್ನು ವಿಧಿಸಿ, ವಸೂಲಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಸದರಿ ಅಧಿನಿಯಮದ ಪ್ರಕರಣ 199 ಎ ರನ್ವಯ ಗ್ರಾಮ ಪಂಚಾಯತಿಯು 199ನೇ ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ ತೆರಿಗೆಗಳು ಮತ್ತು ದರಗಳನ್ನು, ಕಟ್ಟಡಗಳು ಮತ್ತು ಕೃಷಿಯೇತರ ಭೂಮಿಯ ಸಂಬಂಧದಲ್ಲಿ ಕನಿಷ್ಠ 2 ವರ್ಷಗಳಿಗೊಮ್ಮೆ ಮತ್ತು ಅನುಸೂಚಿ-IV ರಲ್ಲಿ ನಿರ್ದಿಷ್ಟಪಡಿಸಿದ ಇತರ ಬಾಬ್ತುಗಳ ಮೇಲೆ ವರ್ಷದಲ್ಲಿ ಕನಿಷ್ಠ ಒಮ್ಮೆ ಪರಿಷ್ಕರಿಸತಕ್ಕದ್ದು, **ಸದರಿ ಅಧಿನಿಯಮದ ಪ್ರಕರಣ 200 ರನ್ವಯ ಬಾಕಿಗಳನ್ನು ಹೊರತುಪಡಿಸಿ ಗ್ರಾಮ ಪಂಚಾಯತಿಗೆ ಸಲ್ಲಿಕೆಯಾಗಬೇಕಾಗಿರುವ ತೆರಿಗೆಗಳು ವಸೂಲಿ ಮಾಡುವುದು ಗ್ರಾಮ ಪಂಚಾಯತಿಗಳ ಪ್ರಾಥಮಿಕ ಹೊಣೆಗಾರಿಕೆಯಾಗಿರುತ್ತದೆ ಮತ್ತು ವಸೂಲು ಆಗಬೇಕಾಗಿರುವ ತೆರಿಗೆಯಲ್ಲಿ ಶೇ 80 ರಷ್ಟು ಕಡಿಮೆ ವಸೂಲಾತಿಯಾಗಿದ್ದರೆ ಹಾಗೆ ಕಡಿಮೆ ವಸೂಲಾತಿಯಾಗಿರುವುದಕ್ಕೆ ಕಾರಣಗಳ ಬಗ್ಗೆ ಗ್ರಾಮ ಪಂಚಾಯತ್ ತನಿಖೆ ಮಾಡಿ ಅವಶ್ಯಕ ಕ್ರಮ ತೆಗೆದುಕೊಳ್ಳತಕ್ಕದೆಂದೂ ಸೂಚಿಸಿದೆ.**

ಮೇಲ್ಕಂಡಂತೆ ವಿವರಿಸಿರುವಂತೆ ಗ್ರಾಮ ಪಂಚಾಯತಿಗಳು ತೆರಿಗೆಗಳನ್ನು ವಿಧಿಸುವ, ಪರಿಷ್ಕರಿಸುವ ಹಾಗೂ ದರಗಳು ಮತ್ತು ಶುಲ್ಕವನ್ನು ವಿಧಿಸುವ ಬಗ್ಗೆ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳಿಗೆ ತಿಳಿಸಿದೆ.

(ಕೆ. ಯಾಲಕ್ಕಿಗೌಡ) 4/5/16
ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು,
2) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.
3) ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.

ಪ್ರತಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಯವರಿಗೆ.
3) ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.